ಓ. ಎಸ್. ನಂಃ 42/2013
ಪಿ.ಡಬ್ಲ್ಯೂಃ 2

ದಿಃ 20-03-2021 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್. ಎನ್. ಪಿ. ಪ್ರತಿವಾದಿ ನಂಃ 1, 3 ರಿಂದ 5 ರ ಪರ ವಕೀಲರಿಂದಃ

ನನ್ನ ಮನೆ ನಂಬರ ನನಗೆ ನೆನಪಿರುವುದಿಲ್ಲ. ನಮ್ಮ ಮನೆಯ ಆಸ್ತಿಯ ಚಕಬಂದಿ ಹೇಳಲು ಬರುವುದಿಲ್ಲ. ಬಸನಗೌಡ ನಿಂಗನಗೌಡ ಮರಿಯಪ್ಪನವರ ನನ್ನ ಅಣ್ಣ ತಮ್ಮಂದಿರು ಆಗಬೇಕು. ನಮ್ಮ ಮನೆಯ ಉತ್ತರ ದಿಕ್ಕಿಗೆ ಬೆಂಡಿಗೇರಿ ರಸ್ತೆ ಇದೆ ಎಂದರೆ ಸರಿ. ಶಿವಾನಂದ ತಮ್ಮಣ್ಣ ಮುಂದಿನಮನಿ ಇವರ ಮನೆಯು ನಮ್ಮ ಆಸ್ತಿಯ ಪಶ್ಚಿಮ ದಿಕ್ಕಿಗೆ ಇರುತ್ತದೆ. ದಿಃ 11-09-1974 ರಂದು ಬಸನಗೌಡ ನಿಂಗನಗೌಡ ಮರಿಯಪ್ಪನವರ ಇವರಿಗೆ ರಿ. ಸ ನಂಃ 43/7, ಕ್ಷೇತ್ರ 3 ಎಕರೆ 24 ಗುಂಟೆ, ರಿ.ಸ ನಂಃ 56 ಕ್ಷೇತ್ರ 18 ಎಕರೆ 32 ಗುಂಟೆ 61/ಅ7+9 ಕ್ಷೇತ್ರ 22 ಗುಂಟೆ, ರಿ.ಸ ನಂಃ 59 ಕ್ಷೇತ್ರ 20 ಎಕರೆ ಜಮೀನು ಭೂ ನ್ಯಾಯಲಯದಿಂದ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ರಿ. ಸ ನಂಃ 43/7, ಕ್ಷೇತ್ರ 3 ಎಕರೆ 24 ಗುಂಟೆಯಲ್ಲಿ ಹೌಸಿಂಗ ಬೋರ್ಡ ಇವರು 28 ಜನರಿಗೆ ಮನೆ ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹೌಸಿಂಗ ಬೋರ್ಡನಿಂದ 28 ಜನರಿಗೆ ಮನೆ ಮಂಜೂರಾಗಿದ್ದು ಅದರಲ್ಲಿ ನನಗೆ ಒಂದು ಮನೆ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ಹೌಸಿಂಗ ಬೋರ್ಡನಿಂದ 28 ಜನರಿಗೆ ಮನೆ ಮಂಜೂರು ಆದರೂ ಕೂಡಾ ನಾನು ಮಂಜೂರು ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚನ್ನಬಸನಗೌಡ ಹನುಮಂತಗೌಡ ಮರಿಯಪ್ಪನವರ ಇವರು ದಾವಾ ಆಸ್ತಿಯ ಮಾಲೀಕರು ಇರುವುದಿಲ್ಲ ಹಾಗೂ ಸದರಿ ದಾವಾ ಆಸ್ತಿಯಲ್ಲಿ ಕಬ್ಜಾ ಇರುವುದಿಲ್ಲ ಆದರೂ ನಾನು ಆತನ ಮಾತುಗಳನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಅದೆ.

ಜೆ. ಎಂ. ಎಫ್. ಸಿ., ಶಿಗ್ಗಾಂವ.